ನನ್ನ ಈ ಮನಃಸ್ಥಿತಿ ರಿತಿಕ್‌ನಿಂದ ಮುಚ್ಚುಮರೆಯಾಗಿರಲು ಸಾಧ್ಯವಾಗಲಿಲ್ಲ.

'ಈಚೆಗೆ ನಿನಗೆ ನನ್ನನ್ನು ಮನೆಯಿಂದ ಓಡಿಸುವ ಚಿಂತೆ ಕಾಡಿಸುತ್ತಿರುತ್ತದೆ', ಅದೊಂದು ದಿನ ರಿತಿಕ್ ನನ್ನನ್ನು ತಮಾಷೆ ಮಾಡಿದ.

'ಇಲ್ಲ, ಹಾಗೇನಿಲ್ಲ.'

'ಏನೋ ಇದೆ.'

'ಏನಿಲ್ಲ'

'ಸುಳ್ಳು ಹೇಳ್ತಿದ್ದೀಯ'

'ಇಲ್ಲ'

'ಹಾಗಾದ್ರೆ ನಿಜ ಹೇಳಬಾರ್ದೇ?'

'ಏನು ಹೇಳ್ಲಿ? ಅಂಥದ್ದೇನೂ ಇಲ್ಲ'

'ಇರುವುದನ್ನೇ ಹೇಳು'

'ಹೋಗ್ಲಿ ಬಿಡು'

'ನೀನು ಅಲ್ಲಗಳೆದಷ್ಟೂ ನನಗೆ ಚಿಂತೆಯಾಗುತ್ತೆ, ಹೇಳಿಬಿಡು.'

ಇಲ್ಲೂ ಸಹ ಹಿಂದಿನಂತೆ ಜನ ವಿವಾದವನ್ನು ಮಾಡಿದರೆ ಎಂದು ಯೋಚಿಸುತ್ತಿದ್ದೇನೆ, ಅಷ್ಟೆ.'

'ಓಹ್ ಹೀಗೋ! ನೀನು ಬೇಡವೆಂದರೆ, ಬರೋದನ್ನು ನಿಲ್ಲಿಸಿ ಬಿಡ್ತೀನಿ.'

'ಏನ್ ಮಾತಾಡ್ತಿದ್ದೀಯ? ಅದಕ್ಕೇ ನಾನು ನಿನಗೆ ಹೇಳ್ತಿರಲಿಲ್ಲ.'

'ಇಲ್ಲ, ನಾವಿಬ್ಬರು ಯಾವುದನ್ನೂ ಮುಚ್ಚಿಡಬಾರದು, ನಮ್ಮ ನಡುವೆ ಇದೇ ತೀರ್ಮಾನವಾಗಿದೆ.'

'ನಾನು ಮುಚ್ಚಿಡುತ್ತಿರಲಿಲ್ಲ, ನೀನು ಅರ್ಥ ಮಾಡಿಕೊಳ್ತಿದ್ದೀಯೋ, ಇಲ್ವೋ ಎಂದು ಯೋಚಿಸುತ್ತಿದ್ದೆ.'

'ನಾನೇಕೆ ಯೋಚ್ನೆ ಮಾಡಬಾರದು? ನಮ್ಮ ಸಮಾಜ ಕಂದಾಚಾರದ್ದು ಎಂದು ನಾನೂ ತಿಳಿದಿದ್ದೇನೆ. ಇಲ್ಲಿ ಅಣ್ಣತಂಗಿ ಸಹ ಜೊತೆ ಜೊತೆಯಲ್ಲಿ ಸಂತೆಗೆ ಹೋದರೆ, ಅವರನ್ನು ಪ್ರೇಮಿ ಪ್ರೇಯಸಿ ಎಂದೇ ನೋಡಲಾಗುತ್ತದೆ', ರಿತಿಕ್‌ನ ಧ್ವನಿ ಕಠೋರವಾಗಿತ್ತು.

'ನೀನು ಸ್ವಲ್ಪ ಹೆಚ್ಚೇ ಯೋಚಿಸುತ್ತಿದ್ದೀಯ, ವಿಷಯ ಇಷ್ಟು ಗಂಭೀರವಾಗಿಲ್ಲ.'

'ಏಕಿಲ್ಲ? ಕಳೆದ ಬಾರಿ ನಿನ್ನ ಕಚೇರಿಯಲ್ಲಿ ನಿನ್ನ ಬಗ್ಗೆ ದೂರು ಕೊಡಲಾಗಿತ್ತು, ಅದು ಗಂಭೀರ ವಿಷಯವಾಗಿರಲಿಲ್ಲವೇ?'

'ಅದು ಹಿಂದಿನ ವಿಷಯ, ಈಗ ಅಂಥದ್ದೇನೂ ಇಲ್ಲ, ಮುನ್ನೆಚ್ಚರಿಕೆಯ ದೃಷ್ಟಿಯಿಂದ ಅಂತ ತಿಳಿ...' ನಾನು ಸಂಕೋಚದಿಂದ ಹೇಳಿದೆ. ನಾನು ಸಂಕೋಚ ಮಾಡಬಾರದಿತ್ತು, ಆದರೂ ನನಗೆ, ನಾನು ಮಾಡಬಾರದ ಕೆಲಸವನ್ನು ಮಾಡುತ್ತಿದ್ದೇನೆ, ಅದು ಸಮಾಜದ ಎದುರು ಬಹಿರಂಗವಾಗಿ ಬರಬೇಕು, ಸಮಾಜದಲ್ಲಿ ಯಾವುದನ್ನು ಸಹ ಗೌಪ್ಯವಾಗಿಡಬಾರದು ಎಂದು ಅನ್ನಿಸಿತು.

'ನೀನು ತುಂಬಾ ದುರ್ಬಲಳು', ರಿತಿಕ್ ನೇರವಾಗಿ ಆರೋಪಿಸಿದ.

'ಇಲ್ಲ, ನಾನು ದುರ್ಬಲಳಲ್ಲ.'

'ನೀನು ದುರ್ಬಲಳಾಗಿದ್ದೀಯ'

'ನಾನಲ್ಲ, ಹಾಗೇನಾದರು ಆಗಿದ್ದರೆ, ನಿನ್ನನ್ನು ನನ್ನ ಮನೆಗೆ ಬರಲು ಸಹ ಬಿಡುತ್ತಿರಲಿಲ್ಲ.'

'ಮತ್ತೆ ಈಗೇಕೆ ನಾನು ಬಂದುಹೋಗುವುದನ್ನು ಗಡಿಯಾರದ ಮುಳ್ಳಿನೊಂದಿಗೆ ಕಟ್ಟು ಹಾಕುತ್ತಿದ್ದೀಯ?'

'ಹೇಳಿದೆನಲ್ಲ, ನಾನ್ಯಾವ ತಲೆನೋವನ್ನು ಕೊಳ್ಳಲು ಬಯಸಲ್ಲ', ನನ್ನ ಮೂಡ್ ಸಹ ಹಾಳಾಗಿತ್ತು.

'ನಾನು ಬರುವುದರಿಂದ ತಲೆನೋವು ಬರಬಹುದು.'

'ನೀನು ವಿಷಯವನ್ನು ತಪ್ಪು ದಿಕ್ಕಿಗೆ ಹೊರಳಿಸುತ್ತಿರುವೆ.'

'ಇಲ್ಲ, ನಾನು ನಿಜವನ್ನು ತಿಳಿಯಲು ಬಯಸುತ್ತೇನೆ, ನೀನು ನನ್ನನ್ನು ಏನೆಂದು ತಿಳಿದಿದ್ದೀಯ?'

'ಇದೇನು ಕೇಳ್ತಿದ್ದೀಯ? ನೀನು ನನಗೇನು ಅನ್ನೋದು ನಿನಗೆ ಗೊತ್ತಿಲ್ವ?'

'ಹೂಂ, ನನಗೆ ಗೊತ್ತಿಲ್ಲ, ನಾನು ನಿನ್ನ ಬಾಯಿಯಿಂದ ಕೇಳಲು ಬಯಸ್ತೀನಿ.'

'ನಮ್ಮ ನಡುವೆ ಒಂದು ಎಳೆಯಷ್ಟು ಸಹ ಮುಚ್ಚುಮರೆಯಿಲ್ಲ, ಆದ್ರೆ ನೀನು ನಿನಗೇನೂ ಗೊತ್ತಿಲ್ಲ ಅಂತ ಹೇಳ್ತಿದ್ದೀಯ?' ನಾನು ರೇಗಿದೆ. ರಿತಿಕ್‌ನ ಈ ವರ್ತನೆಯಿಂದಾಗಿ ನನಗೆ ಆಶ್ಚರ್ಯವಾಗಿತ್ತು.

'ನಾನು ದೇಹದ ಮುಚ್ಚುಮರೆಯ ಬಗ್ಗೆ ಹೇಳ್ತಿಲ್ಲ, ಮನಸ್ಸಿನ ಗೌಪ್ಯತೆಯ ಬಗ್ಗೆ ಹೇಳ್ತಿದ್ದೀನಿ, ನಿನ್ನ ಮನಸ್ಸಿನಲ್ಲಿ ನನ್ನ ಛವಿ ಯಾವ ರೂಪದಲ್ಲಿದೆ, ಇದನ್ನೇ ತಿಳಿಯಲು ಬಯಸುತ್ತಿದ್ದೇನೆ', ರಿತಿಕ್ ಸ್ವಲ್ಪ ಮೆದುವಾದ.

'ನೀನು ನನ್ನ ಪ್ರಿಯಕರ, ನಿನ್ನನ್ನು ನಾನು ಜೀವನಸಂಗಾತಿಯಾಗಿಯೂ ನೋಡ್ತೀನಿ'. ನಾನು ಹಿಂಜರಿಕೆಯಿಲ್ಲದೆ ಹೇಳಿದೆ.

'ಮತ್ತೆ ನೀನ್ಯಾಕೆ ನನ್ನ ಜೊತೆಗಿರಲ್ಲ?'

'ಹೇಗೆ? ಮದುವೆ ಮಾಡಿಕೊಂಡು?'

'ಇಲ್ಲ, ಮದುವೆಯಾಗದೆ.'

'ಇದು ಸಾಧ್ಯವೇ?'

'ನೀನು ಇದನ್ನು ಬಯಸ್ತೀಯ?'

'ಇದು ಸಾಧ್ಯವೇ ಎಂದು ನಾನು ತಿಳಿಯಲು ಬಯಸ್ತೇನೆ.'

'ಒಂದು ವೇಳೆ ನೀನು ಬಯಸಿದರೆ!'

'ನಾನು ಬಯಸ್ತೀನಿ, ನಾನು ನಿನ್ನ ಜೊತೆಗಿರಲು ಬಯಸ್ತೇನೆ.'

'ಆಮೇಲೆ ಪಶ್ಚಾತ್ತಾಪಪಡಲ್ಲ ತಾನೇ?'

'ಏಕೆ?'

'ನಾನು ನಿನ್ನ ಪತಿಯಾಗಿರುವುದಿಲ್ಲವಲ್ಲ'?

'ನನಗೆ ಪತಿ ಬೇಡವೇ ಬೇಡ, ಈ ಶಬ್ದವನ್ನು ಕೇಳಿದರೆ ಉಸಿರು ಕಟ್ಟಿದಂತಾಗುತ್ತದೆ. ನನಗೆ ಸ್ಪೇಸ್ ಬೇಕು, ಪ್ರೀತಿ ಬೇಕು. ಇದು ತುಂಬಾ ಕಷ್ಟದ ಕೆಲಸವಲ್ಲ?'

'ಇಲ್ಲ, ಖಂಡಿತ ಇಲ್ಲ. ಇದು ತುಂಬಾ ಸುಲಭದ ವಿಷಯ. ನೀನು ಹೆಜ್ಜೆ ಹಾಕಿ, ದಾಟಿ ಬಿಡು. ಈ ಜಗತ್ತಿನ ಎಲ್ಲಾ ನೀತಿನಿಯಮಗಳನ್ನು, ಜಗತ್ತಿನ ನಿಯಮ ಕಾನೂನುಗಳನ್ನು ಜಗತ್ತೇ ರಚಿಸಿದೆ. ಈ ನಿಯಮ ಕಾನೂನುಗಳು ಎರಡು ದಿನ ಗದ್ದಲ ಮಾಡುತ್ತವೆ, ನಂತರ ಎಲ್ಲವೂ ಮೌನ, ಜಗತ್ತು ಹಿಂದಕ್ಕೆ ಸರಿಯುವವರನ್ನು ಇನ್ನಷ್ಟು ಹಿಂದಕ್ಕೆ ತಳ್ಳುತ್ತದೆ. ಸಾಹಸದೊಂದಿಗೆ ಎದ್ದು ನಿಲ್ಲುವವರೊಂದಿಗೆ ದೂರವೇ ಉಳಿಯುತ್ತದೆ. ಜಗತ್ತು ತಳ್ಳುವವರನ್ನು ಇನ್ನಷ್ಟು ತಳ್ಳುತ್ತದೆ, ಸಾಹಸದೊಂದಿಗೆ ನಿಲ್ಲುವವರನ್ನಲ್ಲ'. ರಿತಿಕ್ ಒಂದು ಸಣ್ಣ ಭಾಷಣವನ್ನೇ ಬಿಗಿದ.

ಅವನ ಈ ಲಘುಹೇಳಿಕೆಯಿಂದ ನಾನು ತುಂಬಾ ಪ್ರಭಾವಿತಳಾದೆ. ಅವನ ಮಾತುಗಳು ಅಕ್ಷರಶಃ ನನ್ನ ಮನಸ್ಸಿನ ಮಾತುಗಳಾಗಿದ್ದವು. ಅಂದು ರಾತ್ರಿ ರಿತಿಕ್ ಇಡೀ ರಾತ್ರಿ ನನ್ನ ಬಳಿಯೇ ಉಳಿದ. ನಾವು ಅನೇಕ ದಿನಗಳ ನಂತರ ಇಡೀ ರಾತ್ರಿ ಜೊತೆಯಲ್ಲಿ ಮಲಗಿದೆವು; ಪ್ರತಿ ಬಾರಿ ಎಚ್ಚರವಾದಾಗ ಪರಸ್ಪರ ತಬ್ಬಿಕೊಂಡು ಪರಸ್ಪರರ ದೇಹದ ಮಗ್ಗಿಯನ್ನು ಓದುತ್ತಿದ್ದೆವು. ಅದೊಂದು ಮಾದಕ ರಾತ್ರಿಯಾಗಿತ್ತು, ತುಂಬಾ ಮಾದಕ ರಾತ್ರಿಯಾಗಿತ್ತು.

ಅಂದಿನ ರಾತ್ರಿಯ ನಂತರದಿಂದ ರಿತಿಕ್ ಸಾಮಾನ್ಯವಾಗಿ ರಾತ್ರಿಗಳನ್ನು ನನ್ನ ಬಳಿಯೇ ಕಳೆಯಲಾರಂಭಿಸಿದ. ಪ್ರತಿ ಬಾರಿಯೂ ನಾನು ಗಾಢ ಸಮಸ್ಯೆಯನ್ನು ಎದುರಿಸಬೇಕಾಗುತ್ತಿತ್ತು. ಬೆಳಗಾದಾಗ ರಿತಿಕ್ ಚಹಾತಿಂಡಿ ತಿಂದು ಹೊರಟು ಹೋಗುತ್ತಿದ್ದ. ನಾನು ಶೀಘ್ರವೇ ಸಿದ್ಧಳಾಗಿ ಕಚೇರಿಗೆ ಹೋಗುತ್ತಿದ್ದೆ. ಆದರೆ ಮನೆಯಿಂದ ಹೊರಗೆ ಹೆಜ್ಜೆ ಇಡುತ್ತಲೇ ನೆರೆಮನೆಯವಳು ಎದುರಾಗುತ್ತಿದ್ದಳು. ಅವಳ ಕಣ್ಣುಗಳಲ್ಲಿ ಅನೇಕ ಪ್ರಶ್ನೆಗಳು ತೇಲುತ್ತಿದ್ದವು. ನನಗೆ ಗಾಬರಿಯಾಗುತ್ತಿತ್ತು. ನಾನು ಅವಳನ್ನು ನೋಡಿಯೂ ನೋಡದಂತೆ ಅಲ್ಲಿಂದ ಹೋಗಲು ಪ್ರಯತ್ನಿಸುತ್ತಿದ್ದೆ.

ಅದೊಂದು ದಿನ ರಿತಿಕ್ ನನಗೆ ಹೇಳಿದ, 'ನಾನು ನನ್ನ ಲಗ್ಗೇಜುಗಳನ್ನು ಇಲ್ಲಿಗೇ ತರ್ತೀನಿ.'

'ಏಕೆ?' ಕೇಳಿದೆ.

'ನಾವು ತಿಂಗಳಿನಲ್ಲಿ ಇಪ್ಪತ್ತು ದಿನ ಜೊತೆಯಲ್ಲೇ ಇರ್ತೀವಿ, ಜೊತೆಯಲ್ಲೇ ಮಲಗ್ತೀವಿ, ಹೀಗಿರುವಾಗ ಬೇರೆಬೇರೆ ಬಾಡಿಗೆ ಏಕೆ ಕೊಡ್ಬೇಕು? ಜೊತೆಯಲ್ಲಿದ್ದರೆ, ಅನೇಕ ಖರ್ಚುಗಳು ಉಳಿಯುತ್ತವೆ. ನಾನು ನಿತ್ಯ ನಿನ್ನನ್ನು ನಿನ್ನ ಕಚೇರಿಗೂ ಬಿಡಬಹುದು.' ರಿತಿಕ್ ಜೊತೆಯಲ್ಲಿರುವುದರ ಲಾಭವನ್ನು ಎಣಿಕೆ ಮಾಡುತ್ತಾ ಹೇಳಿದ.

'ನೀನು ಹೇಳೋದು ಸರಿ. ಆದ್ರೆ ನಾವು ಬೇರೆ ಕಡೆ ಮನೆಯನ್ನು ತೆಗೆದುಕೊಳ್ಳಬೇಕು, ಇಲ್ಲಿ ಅಲ್ಲ'

